**ಓ.ಎಸ್.117/2016** **ಪಿ.ಡಬ್ಲೂಃ 1**

ಸಾಕ್ಷಿಯನ್ನು ದಿಃ **21.11.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **2** ನೇ ಪ್ರತಿವಾದಿ ಪರ ಶ್ರೀ ಸಿ.ಎಸ್.ವಕೀಲ**ರಿಂದ**

ನನ್ನ ತಂದೆ ಮಾಡಿಟ್ಟಿರುವ ದಿಃ 24.04.2013 ವಿಲ್ ಪ್ರಕಾರ ಪ್ರತಿವಾದಿ 1 ರಿಂದ 3 ರವರಿಗೆ ಬಂದಂತಹ ಆಸ್ತಿ ಪೈಕಿ 2 ನೇ ಪ್ರತಿವಾದಿ ತನಗೆ ಬಂದ ಸ್ವತ್ತುಗಳ ಖಾತೆ ಮಾಡಿಸಿಕೊಂಡು ಅವರು ಅನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ, ನನ್ನ ತಂದೆ ಯಾವುದೆ ವಿಲ್ ಮಾಡಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಅದೆ ರೀತಿ 2 ನೇ ಪ್ರತಿವಾದಿ ತಮಗೆ ವಿಲ್ ಮೂಲಕ ಬಂದ ಆಸ್ತಿಗಳ ಮೇಲೆ ಬ್ಯಾಂಕ್ ನಿಂದ ಸಾಲ ಕೂಡ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ತಮಗೆ ವಿಲ್ ಮೂಲಕ ಬಂದ ಆಸ್ತಿಗಳಲ್ಲಿ ತೆಂಗು ಮತ್ತು ಅಡಿಕೆ ತೋಟ ಮಾಡಿ ಅಭಿವೃದ್ಧಿ ಪಡಿಸಿದ್ದಾರೆ ಎಂದರೆ ಸರಿಯಲ್ಲ, ಅದನು ನನ್ನ ತಂದೆ ಮಾಡಿದ್ದಾರೆ ಅದು ನನ್ನ ಒಟ್ಟು ಕುಟುಂಬದ ಆಸ್ತಿ ನನ್ನ ತಂದೆ ಮಾಡಿದ್ದಾರೆ. ನನ್ನ ತಂದೆ 1972–75 ರಲ್ಲೆ ತೋಟ ಮಾಡಿದ್ದರು. ಆ ಸಮಯದಲ್ಲಿ ನಾನು ಇನ್ನೂ ಹುಟ್ಟಿರಲಿಲ್ಲ , ಆವಾಗಲೆ ನಮ್ಮ ತಂದೆ ತೋಟ ಮಾಡಿದ್ದರು. ಆ ರೀತಿ 1972–75 ರಲ್ಲಿ ತೋಟ ಮಾಡಿದ್ದರೆ ಮರಗಳ ಆಯಸ್ಸು ಮುಗಿದು ಇಷ್ಟೊತ್ತಿಗಾಗಲೆ ತೋಟ ಹಾಳಾಗಬೇಕ್ಕಿತ್ತು ಎಂದರೆ ನಮ್ಮ ತಂದೆ ತಗೊಂಡಾಗ ಅದು ಹಾಳು ಇತ್ತು ಆನಂತರ ನನ್ನ ತಂದೆ ಬೆಳಸಿ ತೋಟ ಮಾಡಿದ್ದಾರೆ ಎನ್ನುತ್ತಾರೆ. ನಮ್ಮ ತಂದೆ ಇದ್ದಾಗ ನಮ್ಮ ಕುಟುಂಬಕ್ಕೆ ಕೇವಲ 1 ರಿಂದ ಒಂದುವರೆ ಎಕರೆ ಮಾತ್ರ ತೆಂಗು ಇತ್ತು, ಆನಂತರದಲ್ಲಿ 2 ನೇ ಪ್ರತಿವಾದಿ ತೋಟ ಮಾಡಿದ್ದರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಅಭಿವೃದ್ಧಿಪಡಿಸಿ ಮಾಡಿರುವ ತೋಟವನ್ನು ಲಪಟಾಸುವ ಸಲುವಾಗಿ ನಾನು ಮತ್ತು 1 ನೇ ಪ್ರತಿವಾದಿಯೊಂದಿಗೆ ಷಾಮಿಲಾಗಿ ಸುಳ್ಳು ದಾವೆ ತಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಿಲ್ ಮಾಡಿದ್ದಾರೆ ಎಂಬ ವಿಚಾರ ನನ್ನ ತಂದೆ ಮರಣ ಹೊಂದಿದ ನಂತರ ವಿಲ್ ಆಯಿತು ಎಂಬ ವಿಚಾರ ನನಗೆ ಗೊತ್ತಾಯಿತು. ನನ್ನ ತಂದೆಯು 2013 ರಲ್ಲಿ ಮರಣ ಹೊಂದಿದ್ದು, ಇಲ್ಲಿಗೆ 9 ವರ್ಷ ತುಂಬಿ 10 ನೇ ವರ್ಷ ನಡೆಯುತ್ತಿದ್ದೆ. ಸದರಿ ವಿಲ್

ನ್ನು ಪ್ರಶ್ನೆ ಮಾಡಿ ನಾನು ನ್ಯಾಯಾಲಯದಲ್ಲಿ ದಾವೆ ಹೂಡಿದ್ದೇನೆ. ಸದರಿ ದಾವೆಯೂ ಯಾವ ನ್ಯಾಯಾಲಯದಲ್ಲಿ ಬಾಕಿ ಇದೆ, ಅದರ ಸಂಖ್ಯೆ ಏನು ಎಂದು ನನಗೆ ಹೇಳಲಾಗುವುದಿಲ್ಲ. ಅಂತಹ ಯಾವುದೆ ದಾವೆ ಯಾವುದೆ ನ್ಯಾಯಾಲಯದಲ್ಲಿ ಹೂಡಿಲ್ಲ, 2 ನೇ ಪ್ರತಿವಾದಿಗೆ ವಿಲ್ ಮೂಲಕ ಬಂದಿರುವ ಆಸ್ತಿಯನ್ನು ಕಬಳಿಸುಳ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಆರ್.ಎ ನಂ.77/2017 ರಂತೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಸಲ್ಲಿಸಿರುವ ಮೇಲ್ಮನವಿಯನ್ನು ನಾನೆ ದಾಖಲು ಮಾಡಿದ್ದೇನೆ. ನನ್ನ ತಂದೆ ಜಮೀನು ಕೊಡುತ್ತೇನೆ ಎಂದು ಕೊಟ್ಟಿರಲಿಲ್ಲ ಆದ್ದರಿಂದ ನನ್ನ ಇಬ್ಬರು ಅಣ್ಣಂದಿರ ವಿರುದ್ದ ಸದರಿ ಮೇಲ್ಮನವಿಯನ್ನು ಸಲ್ಲಿಸಿದ್ದೇನೆ. ಸದರಿ ಮೇಲ್ಮನವಿ ಏನಾಯಿತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ನನ್ನ ತಾತನ ಹೆಸರು ಬೋರೇಗೌಡ, ಅಜ್ಜಿ ಕಾಳದೇವಮ್ಮ ಎಂದರೆ ಸರಿ. ಅವರಿಬ್ಬರ ಹೆಸರಿನಲ್ಲಿ ಇದ್ದ ನಿಡಿ. 3 ರ ಪ್ರಕಾರ ಇದ್ದ ಆಸ್ತಿಗಳ ಪೈಕಿ ನನ್ನ 3 ಜನ ಚಿಕ್ಕಪ್ಪಂದಿರಿಗೆ ತಲಾ 15 ಎಕರೆ ಜಮೀನು ಹೋಗಿದೆ. ನಿಡಿ. 3 ರಲ್ಲಿ ಕಾಣಿಸಿರುವಂತೆ ನನ್ನ ತಾತನ ಸ್ವತ್ತುಗಳ ಪೈಕಿ ನನ್ನ ಚಿಕ್ಕಪ್ಪ ಪುಟ್ಟಸ್ವಾಮಿ ಗೆ 7 ಎಕರೆ 34 ಗುಂಟೆ, ರಾಮಚಂದ್ರೇಗೌಡರಿಗೆ 7 ಎಕರೆ 12 ಗುಂಟೆ, ಮತ್ತು ಶಿವಣ್ಣನಿಗೆ 7 ಎಕರೆ 15 ಗುಂಟೆ ಹೋಗಿದೆ ಎಂದರೆ ಸರಿಯಲ್ಲ. ನಿಡಿ. 3 ರಲ್ಲಿ ನನ್ನ ಮೂರು ಜನ ಚಿಕ್ಕಪ್ಪಂದಿರ ಹೆಸರು ಮಾತ್ರ ಇದೆ, ನನ್ನ ತಂದೆಯ ಹೆಸರು ಇಲ್ಲ. ನಿಡಿ. 3 ರಲ್ಲಿ ನನ್ನ ಚಿಕ್ಕಪ್ಪಂದಿಗೆ ಮಾತ್ರ ಭಾಗ ಕೊಟ್ಟು ನನ್ನ ತಂದೆಗೆ ಏಕೆ ಭಾಗ ಕೊಟ್ಟಿಲ್ಲ ಎಂದು ನಾನು ಯಾವುದಾರೂ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದೇನಾ ಎಂದರೆ ಪ್ರಶ್ನೆ ಮಾಡಿಲ್ಲ. ಪ್ರಶ್ನೆ ಮಾಡಲು ನನಗೇನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿ ನನ್ನ ತಂದೆಗೂ ಭಾಗ ಕೊಟ್ಟಿದ್ದರು ಎನ್ನುತ್ತಾರೆ. ನಮ್ಮ ತಂದೆಗೆ ನಮ್ಮ ತಾತಯಾವುದೆ ಆಸ್ತಿಗಳನ್ನು ಕೊಟ್ಟಲ್ಲದೆ ಇದ್ದರೂ ಕೂಡ ನಿಡಿ. 3 ರ ಆಸ್ತಿಗಳನ್ನು ಮತ್ತು ನಮ್ಮ ಚಿಕ್ಕಪ್ಪಂದಿರನ್ನು ಈ ದಾವಾದಲ್ಲಿ ಸೇರ್ಪಡೆ ಮಾಡದೆ ನಮ್ಮ ತಂದೆಗೂ ಭಾಗ ಕೊಟ್ಟಿದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ. 3 ರಲ್ಲಿರುವ ಆಸ್ತಿಗಳಲ್ಲದೆ ನನ್ನ ಅಜ್ಜಿ ಹೆಸರಲ್ಲಿ ದೈತನಕೆರೆ ಕಾವಲ್ ನ ಸರ್ವೆ ನಂ.. 1/2 ಬಿ ನಲ್ಲಿ 2 ಎಕರೆ 28 ಗುಂಟೆ ಮತ್ತು ಸರ್ವೆ ನಂ. 1/6 ಬಿ 2 ಎಕರೆ 20 ಗುಂಟೆ ಜಮೀನಿದೆ ಎಂದರೆ ಸರಿ. ನನ್ನ ಅಜ್ಜಿ

ಕಾಳದೇವ್ಮ ತೀರಿಹೋಗಿದ್ದಾರೆ. ಸದರಿ ಜಮೀನುಗಳ ಎರಡು **ಆರ್.ಟಿ.ಸಿಗಳನ್ನು ನಿಡಿ. 9 ಮತ್ತು 10** ಎಂದು ಗುರುತಿಸಲಾಯಿತು. ಈ ಎರಡೂ ಆಸ್ತಿಗಳನ್ನು ನನ್ನ ಅಜ್ಜಿಯ ಜೀವನಾಂಶಕ್ಕೆಂದು ಬಿಡಲಾಗಿತ್ತು ಎಂದರೆ ಸರಿ. ನನ್ನ ಅಜ್ಜಿ ಹೆಸರಿನಲ್ಲಿ ನಿಡಿ. 9 ಮತ್ತು 10 ರ ಸರ್ವೆ ನಂ. ಜಮೀನುಗಳಲ್ಲಿ ನಮ್ಮ ತಾತ ಬೋರೇಗೌಡರ ನಾಲ್ಕೂ ಮಕ್ಕಳಿಗೆ ಸಮಾನ ಹಕ್ಕಿದೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಈ ದಾವಾದಲ್ಲಿ ಸೇರ್ಪಡೆ ಮಾಡಲು ನನಗೆ ತೊಂದರೆ ಇತ್ತಾ ಎಂದರೆ ನಮ್ಮ ತಂದೆಯೆ ಚಿಕ್ಕಪ್ಪಂದಿರಿಗೆ ಬಿಟ್ಟು ಕೊಟ್ಟ ಕಾರಣ ನಾನು ಸೇರಿಸಿಲ್ಲ. ನನ್ನ ತಾತನ ಹೆಸರಿನಲ್ಲಿರುವ ಆಸ್ತಿಗಳನ್ನು ಉದ್ದೇಶಪೂರ್ವಕವಾಗಿ 2 ನೇ ಪ್ರತಿವಾದಿ ಸ್ವಾಧೀನ ಹೊಂದಿ ಅಭಿವೃದ್ದಿ ಪಡಿಸಿರುವ ಸ್ವತ್ತುಗಳನ್ನು ಲಪಟಾಯಿಸಲು ಈ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ಅನ್ನರಾಯಪುರದಲ್ಲಿರುವ ದಾವಾ ಐಟಂ ನಂ. 4 ಸರ್ವೆ ನಂ. 60/77 ರ 2 ಎಕರೆ ಜಮೀನು 1 ನೇ ಪ್ರತಿವಾದಿ ಹೆಸರಿನಲ್ಲಿ ಇದೆ. ಇದು ಅವರಿಗೆ ಮಂಜೂರು ಮೂಲಕ ಬಂದಿರುವ ಆಸ್ತಿಯಾಗಿದೆ. 1 ನೇ ಪ್ರತಿವಾದಿಗೆ ಮಂಜೂರಾಗಿರುವ ಈ ಸ್ವತ್ತಿನ ಬಗ್ಗೆ ದಾಖಲೆ ಹಾಜರು ಪಡಿಸಿದ್ದೇನೆ. ಸಾಕ್ಷಿಗೆ ಅವರು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿ 1 ನೇ ಪ್ರತಿವಾದಿಗೆ ಮಂಜೂರಾಗಿರುವ ಸ್ವತ್ತಿನ ದಾಖಲೆ ಯಾವುದು ತೋರಿಸಿ ಎಂದಾಗ ಅದನ್ನು ನಾನು ಇಲ್ಲಿ ಹಾಜರು ಪಡಿಸಿಲ್ಲ, ಅದರ ಅವಶ್ಯಕತೆ ನನಗೆ ಇಲ್ಲ ಎಂದು ನುಡಿಯುತ್ತಾರೆ. ಆ ರೀತಿ ಸದರಿ ಸ್ವತ್ತನ್ನು ಸೇರಿಸುವ ಅವಶ್ಯಕತೆ ನನಗೆ ಇಲ್ಲ ಎಂದು ನಾನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಅದು ಅವರಿಗೆ ಯಾವಾಗ ಮಂಜೂರಾಯಿತು ಎಂಬುದು ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ ಏನು ಬೆಳೆ ಹಾಕಿದ್ದಾರೆ ಎಂದರೆ, ಮನೆ ಮಾಡಿಕೊಂಡಿದ್ದಾರೆ.

ಟಿ. ದಾಸೇಗೌಡ ನನ್ನ ಸೋದರ ಮಾವ ಎಂದರೆ ಸರಿ. ನನ್ನ ತಂದೆ ಅವರ ಜೀವಿತಾಕಾಲದಲ್ಲಿ 2 ಎಕರೆ ಜಮೀನನ್ನು ಈ ಸೋದರ ಮಾವನಿಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ಫೋಟೋದಲ್ಲಿ ಇರುವ ವ್ಯಕ್ತಿ ನನ್ನ ಮಾವನ ಮಗ ಎಂದರೆ ಸರಿಯಲ್ಲ, ಅದು ಯಾರು ಎಂದು ನನಗೆ ಗೊತ್ತಿಲ್ಲ. ದಾವಾ ಐಟಂ ನಂ. 7 ಮತ್ತು 8 ರ ಜಮೀನುಗಳು ಅನ್ಯಕ್ರಾಂತವಾಗಿದ್ದು, ಅದರ ಪೈಕಿ ನಾಗರಾಜು ರವರಿಗೆ 10 ಗುಂಟೆ, ಬಸವರಾಜು ರವರಿಗೆ 10 ಗುಂಟೆ ಜಮೀನು ಮಾರಾಟ

ಮಾಡಿದ್ದಾರೆ ಅದನ್ನು ಬಿಟ್ಟು ದಾವೆಯನ್ನು ಡಿಕ್ರಿ ಮಾಡಬೇಕು ಎಂದು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು, ಅವುಗಳನ್ನು ನಮ್ಮ ತಂದೆ ಇದ್ದಾಗಲೆ ಮಾರಾಟ ಮಾಡಿದ ಕಾರಣ ಈ ದಾವಾದಲ್ಲಿ ಸೇರ್ಪಡೆ ಮಾಡಿಲ್ಲ. ಸದರಿ ಸ್ವತ್ತುಗಳು ದಾವಾ ಐಟಂ ನಂ. 7 ಮತ್ತು 8 ರಲ್ಲಿ ಇದ್ದು, ಇವುಗಳನ್ನು ಈ ದಾವೆಯಿಂದ ರದ್ದು ಪಡಿಸಿಕೊಳ್ಳಲು ತೊಂದರೆ ಏನಿಲ್ಲ, ಆಗಬಹುದು ಎನ್ನುತ್ತಾರೆ. ನನ್ನ ತಂದೆ ಮತ್ತು ನನ್ನ ಅಣ್ಣ-ತಮ್ಮಂದಿರು ನಾನು ಚೆನ್ನಾಗಿರಲಿ ಎಂದು ಹೆಚ್. ಡಿ.ಕೋಟೆಯಲ್ಲಿ 3 ಎಕರೆ, ದಾವಾ ಸ್ವತ್ತಿನ ಪಕ್ಕದಲ್ಲೆ 10 ಎಕರೆ ಜಮೀನು ಈಗಾಗಲೆ ಕೊಟ್ಟಿದ್ದು, ನನಗೆ ದಾವಾ ಸ್ವತ್ತುಗಳಲ್ಲಿ ಭಾಗ ಕೇಳುವ ಯಾವುದೆ ಹಕ್ಕು ಮತ್ತು ಅಧಿಕಾರಿ ಇಲ್ಲ ಎಂದರೆ ಸರಿಯಲ್ಲ, ಅವುಗಳು ನಾನು ಮತ್ತು ನನ್ನ ಪತಿ ಕೊಂಡಿರುವ ಸ್ವತ್ತು ಆಗಿವೆ. ದಾವಾ ಸ್ವತ್ತುಗಳ ಪಕ್ಕದಲ್ಲಿ ಕೊಟ್ಟಿರುವ ಆಸ್ತಿಯು ಅಭಿವೃದ್ದಿ ಆಗಲಿ, ನನ್ನ ತಂಗಿ ಚೆನ್ನಾಗಿರಲಿ ಎಂದು ಅದನ್ನು ಕೂಡ 2 ನೇ ಪ್ರತಿವಾದಿ ತೋಟ ಮಾಡಿ ನನಗೆ ಬಿಟ್ಟು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನಗೆ ಈಗಾಗಲೆ ನನ್ನ ತಂದೆಯ ಪಾಲಿನಲ್ಲಿ ಭಾಗ ಕೊಟ್ಟಿದ್ದರೂ 2 ನೇ ಪ್ರತಿವಾದಿಗೆ ತೊಂದರೆ ನೀಡಲು ಸುಳ್ಳು ಕೇಸ್ ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.